ಅವರು 1945ರ ಸೆಪ್ಟೆಂಬರ್ 2ರಂದು ವಿಯೆಟ್ನಾಂ ದೇಶದ ಸ್ವಾತಂತ್ರ್ಯವನ್ನು ಘೋಷಿಸಿದ್ದರು. ಫ್ರೆಂಚರ ವಿರುದ್ಧ ಮೊದಲ ದಂಗೆ ನಡೆದದ್ದು (1886–87) ಕೂಡ ಇದೇ ಸ್ಥಳದಲ್ಲಿಯೇ.

ವಿಶಾಲವಾದ ಈ ಪ್ರದೇಶದಲ್ಲಿ ಒಂದೆಡೆ ಎತ್ತರವಾಗಿ ಧೀರೋದಾತ್ತವಾಗಿ ಬೂದು ಬಣ್ಣದ ಗ್ರಾನೈಟ್ ಕಲ್ಲಿನಲ್ಲಿ ಎದ್ದು ನಿಂತ ಹೋ ಚಿ ಮಿನ್ ಅವರ ಭವ್ಯ ಸ್ಮಾರಕವಿದೆ. ಮತ್ತೊಂದೆಡೆ ಅಧ್ಯಕ್ಷರ ಅರಮನೆ, ವಿದೇಶಾಂಗ ವ್ಯವಹಾರಗಳ ಸಚಿವಾಲಯ, ರಾಷ್ಟ್ರೀಯ ಅಸೆಂಬ್ಲಿ ಸೇರಿದಂತೆ ಹಲವಾರು ಪ್ರಮುಖ ಕಟ್ಟಡಗಳಿವೆ. ಸನಿಹದಲ್ಲಿಯೇ ಹೋ ಚಿ ಮಿನ್ ಅವರ ಸರಳ ಜೀವನದ ಪ್ರತೀಕವಾಗಿ ಅವರ ವಾಸದ ಮನೆ, ಮ್ಯೂಸಿಯಂ ಸಹ ಇವೆ. ಹಸುರು ಮೈದಾನ, ಹೂದೋಟ, ಬಣ್ಣ ಬಣ್ಣದ ಹೂಗಿಡಗಳು, ಮರಗಳಿಂದ ಈ ಪ್ರದೇಶ ಸುಂದರವಾಗಿದೆ. ವಿವಿಧೆಡೆಗಳಿಂದ ತಂದಿರುವ ಸುಮಾರು 250ಕ್ಕೂ ಹೆಚ್ಚು ಪ್ರಭೇದದ ಹೂಗಿಡಗಳನ್ನು ಸ್ಮಾರಕದ ಸುತ್ತ ಬೆಳೆಸಿದ್ದಾರೆ.

ವಿಯೆಟ್ನಾಂ ಸಂರಕ್ಷಣಾ ಪಡೆಯ ಬಿಳಿ ಸಮವಸ್ತ್ರ ಧರಿಸಿರುವ ಯೋಧರು ಸ್ಮಾರಕದ ಬಳಿ ಶಿಸ್ತಿನಿಂದ ನಿಂತಿರುತ್ತಾರೆ. ಮೊಬೈಲ್, ಕ್ಯಾಮೆರಾ, ಬ್ಯಾಗ್‌ಗಳನ್ನು ಅದಕ್ಕೆ ನಿಗದಿಪಡಿಸಿದ ಕೌಂಟರಿನಲ್ಲಿ ಕೊಟ್ಟು ಸ್ಮಾರಕ ನೋಡಲು ಹೋಗಬೇಕು. ಸ್ಮಾರಕ 70 ಅಡಿ ಎತ್ತರ ಮತ್ತು 135 ಅಡಿ ಅಗಲ ಇದೆ. ಬೃಹತ್ ಕಂಬಗಳಿಂದ ಕೂಡಿರುವ ಸ್ಮಾರಕದ ಗೋಪುರವನ್ನು ವಿಯೆಟ್ನಾಂ ಶೈಲಿಯಲ್ಲಿ ಇಳಿಜಾರಾಗಿ ನಿರ್ಮಿಸಿರುವರು.



ವಿಯೆಟ್ನಾಂ ದೇಶದ ನೋಟಿನ ಮೇಲೆ ಹೋ ಚಿ ಮಿನ್ ಚಿತ್ರ

ಸ್ಮಾರಕದ ಕೇಂದ್ರಭಾಗದಲ್ಲಿ ಗಾಜಿನ ಪೆಟ್ಟಿಗೆಯಲ್ಲಿ ಹೋ ಚಿ ಮಿನ್ ಅವರ ಸಂರಕ್ಷಿತ ಮೃತ ದೇಹವನ್ನು ಇರಿಸಲಾಗಿದೆ. ಮರದ ಕೆತ್ತನೆಯ ಟೇಬಲ್ ಮೇಲಿನ ಮಂದ ಬೆಳಕಿನ ಗಾಜಿನ ಪೆಟ್ಟಿಗೆಯಲ್ಲಿ ಅಂಕಲ್ ಹೋ ಮಲಗಿ ನಿದ್ರಿಸುತ್ತಿರುವಂತೆ ಭಾಸವಾಗುತ್ತದೆ. ಅಲ್ಲಿ ನಿಲ್ಲುವಂತಿಲ್ಲ. ನಿಧಾನವಾಗಿ ಒಂದು ಪಕ್ಕದಿಂದ ಹಾದು ಇನ್ನೊಂದು ಪಕ್ಕದಿಂದ ಹೊರಬರಬೇಕು. ಸ್ಮಾರಕದ ಹೊರಗೋಡೆಯ ಮೇಲೆ 'ಅಂಕಲ್ ಹೋ ನೀವು ನಮ್ಮೊಂದಿಗೆ ಸದಾ ಇದ್ದೀರಿ' ಎಂಬರ್ಥದ ವಾಕ್ಯವನ್ನು ವಿಯೆಟ್ನಾಂ ಭಾಷೆಯಲ್ಲಿ ಬರೆಯಲಾಗಿದೆ.

## ಅರಮನೆ ಒಲ್ಲದ ಸರಳವ್ಯಕ್ತಿ

ಇದು ಫ್ರೆಂಚರ ಕಾಲದ ಹಳದಿ ಬಣ್ಣದ ಕಟ್ಟಡ. ಫ್ರೆಂಚರ ಆಳ್ವಿಕೆಯಲ್ಲಿ ವಿಶಾಲವಾದ ಧ್ಯಾನದ ನಡುವಿನ ಈ ಭವ್ಯವಾದ ಅರಮನೆಯಲ್ಲಿ ಅವರ ಸರ್ವೋಚ್ಚ ಅಧಿಕಾರಿ (ಗವರ್ನರ್) ರಾಜನಂತೆ ಇಲ್ಲಿ ವಾಸಿಸುತ್ತಿದ್ದರು. ವಿಯೆಟ್ನಾಂ ಫ್ರೆಂಚರಿಂದ ಸ್ವತಂತ್ರವಾದ ಮೇಲೆ ಹೋ ಚಿ ಮಿನ್ ಅವರಿಗೆ ಇಲ್ಲಿ ವಾಸಿಸಲು ಹೇಳಿದಾಗ ಅವರು ನಿರಾಕರಿಸಿದರು. ತನ್ನ ಜನರಿಗಿಲ್ಲದ ವೈಭೋಗ ತನಗೇಕೆ ಎಂದು ಅಲ್ಲೇ ಪುಟ್ಟ ಮೂರು ಕೋಣೆಯ ಪುಟ್ಟ ಮನೆಯಲ್ಲಿ ಉಳಿದರು. ನಂತರ ಥಾಯ್ ಮಾದರಿಯ ಮರದ ಪುಟ್ಟ ಮನೆಯೊಂದನ್ನು ಅಂಕಲ್ ಹೋ ಅವರಿಗಾಗಿ ನಿರ್ಮಿಸಿದರು.

ಮರದ ಕಂಬಗಳ ಮೇಲೆ ನಿರ್ಮಾಣವಾದ ಒಂದಂತಸ್ತಿನ ಪುಟ್ಟ ಮನೆಯಲ್ಲಿ, ಹೋ ಅವರ ಓದು ಮತ್ತು ಬರೆಯುವ ಕೊಠಡಿ, ಪುಸ್ತಕಗಳಿರುವ ಕಪಾಟು, ಮಲಗುವ ಕೋಣೆ, ಊಟದ ಕೋಣೆ, ಅತಿಥಿಗಳನ್ನು ಭೇಟಿ ಮಾಡುವ ಸ್ಥಳಗಳಿವೆ. ಅವರು ಬಳಸುತ್ತಿದ್ದ ಕಾರುಗಳನ್ನೂ ಪ್ರದರ್ಶಿಸಲಾಗಿದೆ. ಇಲ್ಲಿ ಸ್ಮರಣಿಕೆಗಳನ್ನು ಮಾರುವ ಕೆಲವು ಮಳಿಗೆಗಳಿದ್ದು, ಅಲ್ಲಿ ಹೆಚ್ಚಾಗಿ ಹೋ ಅವರನ್ನು



ವಿಯೆಟ್ನಾಂ ರಾಜಧಾನಿ ಹನಾಯ್ ನಗರದಲ್ಲಿರುವ 'ಹೋ ಚಿ ಮಿನ್' ಸ್ಮಾರಕ